ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಪತ್ರದಲ್ಲಿ ಕೇರಳ ರಾಜ್ಯವನ್ನು ಹೊರತುಪಡಿಸಿ ಪಶ್ಚಿಮ ಘಟ್ಟ ವ್ಯಾಪ್ತಿಗೆ ಒಳಪಡುವ ಇತರೇ ರಾಜ್ಯಗಳಾದ ಗುಜರಾಜ್, ಮಹಾರಾಷ್ಟ್ರ, ಗೋವಾ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಪರಿಸರ (ಸಂರಕ್ಷಣೆ) ಕಾಯ್ದೆ, 1986ರ ಪ್ರಕಾರ, ಸಲಹೆ ಸೂಚನೆಗಳನ್ನು ನೀಡಿದ ನಂತರವೇ ಪರಿಸರ ಸೂಕ್ಷ್ಮ ಪ್ರದೇಶಗಳ ಬಗ್ಗೆ ಕೇರಳ ರಾಜ್ಯವು ಸೇರಿದಂತೆ ಹೊಸದಾಗಿ ಕರಡು ಅಧಿಸೂಚನೆ ಹೊರಡಿಸುವುದಾಗಿಯೂ ಮತ್ತು ಈ ಬಗ್ಗೆ ಆಯಾ ರಾಜ್ಯಗಳ ಸಲಹೆ ಸೂಚನೆಗಳನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿರುವುದರಿಂದ, ಭಾರತ ಸರ್ಕಾರ ಈ ಹಿಂದೆ ಹೊರಡಿಸಿದ ದಿನಾಂಕ: 10–03–2014ರ ಅಧಿಸೂಚನೆಯಿಂದ ಯಾವುದೇ ಪರಿಣಾಮ ಸದ್ಯಕ್ಕೆ ಇರುವುದಿಲ್ಲ.

ಕಾಡಾನೆ ಹಾವಳಿಯಿಂದ ಪ್ರಾಣ ಮತ್ತು ಬೆಳೆ ಹಾನಿಯಾಗಿರುವುದು

876 (1275); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆ ಹಾವಳಿಯಿಂದಾದ ಪ್ರಾಣ ಹಾನಿ ಹಾಗೂ ಬೆಳೆ ಹಾನಿ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಹಾನಿಗೊಳಗಾದವರಿಗೆ ನೀಡಲಾದ ಪರಿಹಾರದ ಮೊತ್ತವೆಷ್ಟು (ಮಾಹಿತಿ ಒದಗಿಸುವುದು);

ಇ) ಯಾವ ಮಾನದಂಡದ ಮೇಲೆ ಪರಿಹಾರ ನೀಡಲಾಗಿದೆ (ವಿವರವಾದ ಮಾಹಿತಿ ಒದಗಿಸುವುದು)?

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಮಾನವ ಪ್ರಾಣ ಹಾನಿ ಹಾಗೂ ಬೆಳೆಹಾನಿ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ಮಾನವ ಪ್ರಾಣ ಹಾನಿ	ಬೆಳೆಹಾನಿ
2011–12	03	3205
2012–13	05	3058
2013–14	05	2633

ಆ) ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಮಾನವ ಪ್ರಾಣ ಹಾನಿ ಹಾಗೂ ಬೆಳೆಹಾನಿ ಪ್ರಕರಣಗಳಿಗೆ ಪಾವತಿಸಿರುವ ದಯಾತ್ಮಕ ಧನದ ವಿವರ ಈ ಕೆಳಕಂಡಂತಿದೆ.

(₹.ಗಳಲ್ಲಿ)

ವರ್ಷ	ಮಾನವ ಪ್ರಾಣ ಹಾನಿ	ಬೆಳೆಹಾನಿ
2011–12	12,00,000/–	89,67,980/–
2012–13	25,00,000/–	1,14,62,610/–
2013–14	25,00,000/–	1,12,03,282/–

ಇ) 2011–12ನೇ ವನ್ಯಪ್ರಾಣಿಗಳಿಂದ ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ ₹ 3.50ಲಕ್ಷಗಳ ದಯಾತ್ಮಕ ಧನವನ್ನು ಸರ್ಕಾರಿ ಆದೇಶ ಸಂಖ್ಯೆ: ಅಪಜೀ.143.ಎಫ್‌ಡಬ್ಲ್ಯೂಎಲ್. 2010 ದಿನಾಂಕ: 30–04–2011ರ ಪ್ರಕಾರ ನೀಡಲಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ.143.ಎಫ್‌ಡಬ್ಲ್ಯೂಎಲ್. 2010 ದಿನಾಂಕ: 03–08–2011ರ ಪ್ರಕಾರ ವನ್ಯಪ್ರಾಣಿಗಳಿಂದ ಮೃತಪಟ್ಟ ವ್ಯಕ್ತಿಯು ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಲ್ಲವೆಂದು ಹಾಗೂ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಸದರಿ ವ್ಯಕ್ತಿಯು ವನ್ಯಪ್ರಾಣಿಯಿಂದ ಮೃತನಾಗಿದ್ದಾನೆಂದು ದೃಢಪಟ್ಟಿದಲ್ಲಿ ಮರಣ ಹೊಂದಿದ ವ್ಯಕ್ತಿಯ ವಾರಸುದಾರರಿಗೆ ₹ 5.00 ಲಕ್ಷಗಳ ದಯಾತ್ಮಕ ಧನವನ್ನು ನೀಡಲಾಗುತ್ತಿದೆ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ.143.ಎಫ್‌ಡಬ್ಲ್ಯೂಎಲ್. 2010 ದಿನಾಂಕ: 30–04–2011 ಮತ್ತು ಅಪಜೀ.109.ಎಫ್‌ಎಪಿ.2014 ದಿನಾಂಕ: 13/08/2014ರ ಪ್ರಕಾರ ವನ್ಯಪ್ರಾಣಿಗಳಿಂದ ಉಂಟಾದ ಬೆಳೆಹಾನಿ ಪ್ರಕರಣಗಳಿಗೆ ಗರಿಷ್ಟ ₹ 1,00,000/–ಗಳವರೆಗೆ ದಯಾತ್ಮಕ ಧನವನ್ನು ನೀಡಲಾಗುತ್ತಿದೆ. ಒತ್ತುವರಿಗೊಂಡ ಅರಣ್ಯ ಭೂಮಿಯಲ್ಲಿ ಬೆಳೆಯಲಾದ ಬೆಳೆಗಳು ಕಾಡು ಪ್ರಾಣಿಗಳಿಂದ ಹಾನಿಗೊಂಡಲ್ಲಿ ಅಂತಹ ಬೆಳೆ ನಷ್ಟಕ್ಕೆ ದಯಾತ್ಮಕಧನ ನೀಡಲಾಗುವುದಿಲ್ಲ.

ವಿವರ ಕೆಳಕಂಡಂತಿದೆ.

1) ₹ 7,500/– ಗಳ ವರೆಗಿನ ಮೊತ್ತದ ಬೆಳೆ ನಾಶಕ್ಕೆ ಭೂಮಾಲಿಕರಿಗೆ ಪೂರ್ಣ ಪ್ರಮಾಣದ ಮೊತ್ತವನ್ನು ಮಂಜೂರು ಮಾಡಲಾಗುತ್ತದೆ.
2) ₹ 7,500/– ಗಳಿಗೆ ಮೇಲ್ಪಟ್ಟು ಹಾಗೂ ₹ 35,000/– ಗಳ ವರೆಗಿನ ಬೆಳೆ ನಾಶಕ್ಕೆ ಶೇಕಡಾ 50 ರಷ್ಟು ಪರಿಹಾರಧನ ಕನಿಷ್ಠ ₹ 7,500/– ಮತ್ತು ಗರಿಷ್ಠ ₹ 21,250/– ನೀಡಲಾಗುತ್ತದೆ.
3) ₹ 35,000/– ಗಳಿಗೆ ಮೇಲ್ಪಟ್ಟ ಬೆಳೆ ನಾಶಕ್ಕೆ ಶೇಕಡಾ 30 ರಷ್ಟು ಪರಿಹಾರ, ಕನಿಷ್ಟ ₹ 21,250/– ಮತ್ತು ಗರಿಷ್ಟ ಮೊತ್ತ ₹ 1,00,000/– ಗಳ ದಯಾತ್ಮಕ ಧನ ನೀಡಲಾಗುತ್ತದೆ.

ಯುವ ನೀತಿ

879 (1276); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)